ರಾಯಚೂರು ಸೀಮೆಯ ಬಿಸಿಲು ಬೆಳುದಿಂಗಳನುಂಡ ಕಥೆಗಾರರ ಪಂಕ್ತಿಯ ಹೊಸ ಮಿನುಗು ಮುದಿರಾಜ್ ಬಾಣದ್, 'ಚಾನ್ನೆ' ಕಥಾಸಂಕಲನದ ಮೂಲಕ ಸಹೃದಯರ ಗಮನಸೆಳೆದವರು. ಮಾನ್ವಿ ತಾಲ್ಲೂಕಿನ ಗುಡದಿನ್ನಿಯ ಮುದಿರಾಜ್, ಅಂಚೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ವೈಷ್ಣವಿ ಪ್ರಕಾಶನ'ದ ಮೂಲಕ ಪುಸ್ತಕ ಪ್ರಕಾಶನದಲ್ಲೂ ಸಕ್ರಿಯರು.

ಗಾಬರಿಯಿಂದ 'ಸರ್ ನಿಮ್ ಚೀಲ, ಕೈಚೀಲ ಸರ್' ಎಂದ. ಅವರ ಕೈಚೀಲದಲ್ಲಿ ತುಂಬಿಸಿಕೊಂಡು ಬಂದ ಕಾಯಿಪಲ್ಲೇನ ಒಂದು ಆಕಳ ಮೂತಿ ಹಾಕಿ ತಿನ್ನುತ್ತಿತ್ತು. ಅಲ್ಲೇ ಇದ್ದ ಬಡಿಗೆ ತಗೊಂಡು 'ತುಡುಗು ದನಗಳು ಹಸಿರು ತಪ್ಪಲ ಕಂಡ್ರ ಸಾಕು ಬಾಯಿ ಹಾಕಾಕ ಬರ್ತಾವ' ಅಂತ ಪಾರ್ವತಿ ಆ ಆಕಳನ್ನು ಬೈಯುತ್ತ ಓಡಿಸಿದಳು. 'ಸರಿ ಸರಿ ನೀವು ಹೋಗಿ, ನಾ ಬರ್ತಿನಿ' ಅಂತ ಲಚುಮಣ್ಣ ಮಾಷ್ಟ್ರ ಅವಸರವಸರವಾಗಿ ಹೋದರು. ಲಚುಮಣ್ಣ ಮಾಷ್ಟ್ರ ನೋಟ, ಮಾತು ಸಣ್ಣವನಿದ್ದರೂ ರಾಮುವಿಗೆ ಅದೇನೋ ವಾಸನೆ ಹೊಡೆದು ಅವರ ಮೇಲೆ ಸಿಟ್ಟು ಬಂದಿತ್ತು.

ಸಾಯಂಕಾಲ ರಾಮು ಮನೆಯಲ್ಲಿ ಆನೆಯ ಚಿತ್ರವನ್ನು ಬಿಡಿಸಲು ಬಿಳಿಹಾಳೆ, ಪೆನ್ಸಿಲ್, ಬಣ್ಣ ಬಣ್ಣದ ಕಲರ್ ಡಬ್ಬಿ ತಗೊಂಡು ಚಿತ್ರ ಬಿಡಿಸತೊಡಗಿದ. ಆನೆಯ ಸೊಂಡಿಲನ್ನು ಬಿಡಿಸಿದ. ಸ್ವಲ್ಪ ದಪ್ಪ ಬಂತು, ಅಳಿಸಿದ. ನಿಧಾನಕ್ಕೆ ಮತ್ತೆ ಬಿಡಿಸಿದ. ನೀಟಾಗಿ ಸೊಂಡಿಲು ಬಂತು. ಹಾಗೆ ಸೊಂಡಿಲಿನ ಕೊನೆ ಭಾಗದಿಂದ ಆನೆಯ ಡುಬ್ಬವನ್ನು ಕಾಮನಬಿಲ್ಲಿನ ತರಹ ಬಗ್ಗಿಸಿದ. ಅದಕ್ಕೆ ಹತ್ತಿಕೊಂಡು ಚಿಕ್ಕದೊಂದು ಬಾಲ ಮಾಡಿ ನಂತರ ಕಾಲುಗಳನ್ನು ಇಳಿಸತೊಡಗಿದ. ಎಷ್ಟು ಪ್ರಯತ್ನ ಪಟ್ಟರೂ ಆನೆಯ ಕಾಲುಗಳು ಸರಿಯಾಗಿ ಬರಲೇ ಇಲ್ಲ. ಆನೆಯ ಕಣ್ಣು, ಕಿವಿ ಬಿಡಿಸಿದ. ಅಲ್ಲಿಂದ ಕೆಳಭಾಗಕ್ಕೆ ಬಂದು ಕಾಲುಗಳನ್ನು ಬಿಡಿಸತೊಡಗಿದ. ತುಂಬ ಚೆನ್ನಾಗಿ ಬಂತು. ಖುಷಿಗೊಂಡು ಬೂದು ಬಣ್ಣದ ಕಲರ್ ಬಳಿದ. ದೊಡ್ಡದೊಂದು ಆನೆ ಅವನ ಬಿಳಿಹಾಳೆಯ ಮೇಲೆ ಎದ್ದು ಬರುವ ಹಾಗೆ ನಿಂತಿತ್ತು. ಖುಷಿಯಾಗಿ ಓಡಿ ಅವನ ತಾಯಿ ಪಾರ್ವತಿಗೆ ತೋರಿಸಿದ. ಅಡುಗೆ ಮಾಡುತ್ತಿದ್ದ ಪಾರ್ವತಿ ಮಗ ಬರೆದ ಚಿತ್ರವನ್ನು ಹಣೆಮೇಲಿಂದ ಇಳಿಯುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತ ನೋಡಿದಳು. 'ಚೆಂದ ಬರ್ದಿದಿ ಮುದುಕ, ಮುಂದಿನ ವಾರ ಅದೇನೋ ನಿಮ್ದು ಚಿತ್ರ ಬಿಡಿಸುವ ಪರ್ದೆ ಐತಂತಲ್ಲ, ಅಲ್ಲಿ ಚೆಂದ ಬಿಡಿಸಿ ಮೊದಲ ಬೊಮಾನ ತಗೊಂಡು ಬಾ. ನಿಮ್ಮ ಮಾಸ್ತರು ಖುಷಿಯಾಗ್ತರೆ' ಅಂದಳು. ತಾಯಿಯ ಮಾತು ಕೇಳಿ ರಾಮು ಒಂದು ಕ್ಷಣ ಅಚ್ಚರಿಗೊಂಡ. 'ಅಮ್ಮ ನಿನ್ಗೆ ಯಾರ್ ಹೇಳಿದ್ದು, ಮುಂದಿನ ವಾರ ಸ್ಪರ್ಧೆ ಐತಂತ?' ಅಂದ. 'ಅಯ್ಯಾ ಹಿಂಗ್ಯಾಕ ಕೇಳ್ತಿ? ನಿನ್ನೆ ನಿಮ್ ಲಚುಮಣ್ಣ ಸಾರು ಮಧ್ಯಾನ ಮನಿಗೆ ಬಂದು ಹೇಳಿ ಹೋದ್ರು' ಅಂದಳು. ರಾಮು ಮತ್ತಷ್ಟು ಕುಸಿದುಹೋದ. ಮಾಷ್ಟ್ರ ಮನೆಗೆ ಬಂದು ಹೇಳಿ ಹೋಗಿದ್ದು ಅವನಿಗೆ ಸ್ವಲ್ಪ ಹೆಚ್ಚೇ ಅಚ್ಚರಿಯಾಯಿತು ಮತ್ತು ದುಃಖನೂ ಆಯಿತು. ಮುಂದಿನ ವಾರ ನಡೆಯುವ ಚಿತ್ರಕಲಾ ಸ್ಪರ್ಧೆಯಲ್ಲಿ ತಾನು ಹಂಗ ಬಿಡಿಸಬೇಕು ಹಿಂಗೆ ಬಿಡಿಸಬೇಕು ಅಂತೆಲ್ಲ ರಾತ್ರಿಯೆಲ್ಲ ನಿದ್ದೆಗೆಟ್ಟು ಏನೇನೋ ಯೋಜನೆ ಹಾಕಿಕೊಂಡಿದ್ದ. ಆದರೆ, ಈಗ ಸ್ಪರ್ಧೆಗೆ ಹೋಗೋದು ಬೇಡ ಅನ್ನುವಷ್ಟರ ಮಟ್ಟಿಗೆ ಜಿಗುಪ್ಸೆಯಾಯಿತು ಅವನಿಗೆ.

## 4

'ಶಾಂತ ಅವನಿಂದ ನಾನು ಒಳ್ಳೆ ಪಾರಾದೆ' ಅಂತ ಪಾರ್ವತಿ, ಶಾಂತನ ತಲೆಯಲ್ಲಿನ ಸೀರನ್ನು ಸಣ್ಣ ಬಾಚಣಿಕೆಯಿಂದ ತೆಗೆಯುತ್ತಾ ಹೇಳಿದಳು. 'ಯಾಕಮ್ಮ ಅಂತದು ಏನಾಯ್ತು?' ಅಂತ ಶಾಂತ ಕೂತೂಹಲದಿಂದ ಕೇಳಿದಳು. 'ಅಮ್ಮ ನನ್ಗೆ ಹಸಿವಾಗ್ಯಾದ' ಅಂತ ರಾಮು ಓಡಿಬಂದ. 'ಮುರಾಸಂಜಿಲೆ ಯಾರಾನ ಉಣ್ತಾರೇನು ಹುಚ್ಚ, ಇನ್ನು ಸ್ವಲ್ಪ ತಡಿ, ದೀಗಿ ಮುಡಿಸೋ ಹೊತ್ತಾಯಿತು, ಆಮೇಲೆ ಉಣ್ಣುವಂತಿ' ಅಂತ ಶಾಂತಳ ತಲೇಲಿ ಸೀರು ತೆಗೆಯುವುದರಲ್ಲಿ ಪಾರ್ವತಿ ಮಗ್ನಳಾದಳು. ರಾಮು ಒಳಗೋಗಿ ಟೀವಿ ಹಚ್ಚಿ ಒಂದು ಬಿಳಿಹಾಳೆ ತಗೊಂಡು ಚಿತ್ರ ಬಿಡಿಸುತ್ತ ಕುಳಿತ.

'ಅಮ್ಮ ಹೇಳು, ಅದೇನೋ ಹೇಳ್ತಿದ್ದಿಯಲ್ಲ?' ಅಂತ ಶಾಂತ ಸೀರು ಒರೆಯುತ್ತ ಕೇಳಿದಳು.

'ಮೊನ್ನೆ ನಿಮ್ಮ ಚಿಕ್ಕಮ್ಮಳ ಮಗಳದು ಬುತ್ತಿ